# ಯಕ್ಷಗಾನದಲ್ಲಿ ಪ್ರಾಣಿಗಳ ಪಾತ್ರ ನಿರ್ವಹಣೆ

**ಯಕ್ಷಗಾನ ಡೇರೆಮೇಳಗಳ ಪ್ರದರ್ಶನಗಳಲ್ಲಿಯೂ ಒಂದು ಕಾಲಘಟ್ಟದಲ್ಲಿ ಸಮುದ್ರ ಮಥನ, ಐರಾವತದಂಥ ಆಟದಲ್ಲಿ ಜನಾಕರ್ಷಣೆಗಾಗಿ ಜೀವಂತ ಆನೆಯ ಮೇಲೆ ದೇವೇಂದ್ರ ಏರಿ ಬರುವ ಸಾಹಸವೂ ನಡೆದುಹೋಯಿತು. ಇದೇ ಗೀಳು ಮುಂದುವರಿದಿದ್ದರೆ, ಅನೇಕಾನೇಕ ಪ್ರಾಣಿ ಪಾತ್ರಗಳ ಬದಲು ನಿಜವಾದ ಪ್ರಾಣಿಗಳೇ ರಂಗಸ್ಥಳದಲ್ಲಿ ವಿಜೃಂಭಿಸುವಂತಾಗಿ ಡೇರೆ ಮೇಳಗಳೆಲ್ಲ ಸರ್ಕಸ್ ಕಂಪನಿಗಳಾಗುತ್ತಿದ್ದವು.**

■ **ಡಾ. ಜಿ.ಎಸ್.ಭಟ್**
ಚಿತ್ರಗಳು: ನಿಧಿ ಪ್ರಕಾಶನ, ಸಾಗರ



ಯಕ್ಷಗಾನದ ನಂದಿಯ ವೇಷ



ಪುನರ್‌ರಚಿತ ಯಕ್ಷಗಾನೀಯ ಸಿಂಹ ವೇಷ



ಯಕ್ಷಗಾನದ ಸ್ವರೂಪಕ್ಕೆ ಒಪ್ಪದ ವಾಸ್ತವದ ಅನುಕರಣೆಯ ಸಿಂಹ

ಪುರಾಣದಲ್ಲಿ ಬರುವ ದೇವ, ಮಾನವ, ದಾನವ, ಪ್ರಾಣಿ, ಪಕ್ಷಿ ಪಾತ್ರಗಳೆಲ್ಲ ಯಕ್ಷಗಾನದಲ್ಲಿಯೂ ಬರುತ್ತವೆ. ಆದರೆ ಪುರಾಣವೇ ಯಕ್ಷಗಾನವಲ್ಲ. ಆ ಪುರಾಣ ಯಕ್ಷಗಾನಕ್ಕೆ ಬರುವಾಗ ಈ ರಂಗಸಂಪ್ರದಾಯದ ಸ್ವರೂಪ ಮತ್ತು ಸಾಧ್ಯತೆಗಳಿಗೆ ಅನುಗುಣವಾಗಿ ಪರಿವರ್ತನೆಯಾಗಲೇ ಬೇಕಾಗುತ್ತದೆ. ಅದಕ್ಕೆ ಪ್ರಾಣಿ ಪಾತ್ರಗಳೂ ಹೊರತಲ್ಲ. ಯಕ್ಷಗಾನದಲ್ಲಿ ಬರುವ ಸಿಂಹ, ಜಾಂಬವ, ನಂದಿ, ಹನುಮಂತ ಮುಂತಾದ ಪ್ರಾಣಿ ಪಾತ್ರಗಳು ಯಕ್ಷಗಾನೀಯ ಪರಿವರ್ತನೆಗೆ ಒಳ್ಳೆಯ ಉದಾಹರಣೆಗಳು.

ಇವೇ ಪ್ರಾಣಿಗಳು ವಾಸ್ತವ ಜಗತ್ತಿನಲ್ಲಿ, ಪ್ರಕೃತಿಯಲ್ಲಿ, ಶಿಲ್ಪಗಳಲ್ಲಿ, ಚಿತ್ರಗಳಲ್ಲಿ ಕಾಣಸಿಗುತ್ತವೆ. ಯಕ್ಷಗಾನ ವಾಸ್ತವ ರಂಗಭೂಮಿಯಲ್ಲವಾದುದರಿಂದ ಇವೇ ಪ್ರಾಣಿಗಳು ಯಕ್ಷಗಾನದಲ್ಲಿ ಪಾತ್ರಗಳಾಗಿ ಕಾಣಿಸಿಕೊಳ್ಳುವ ಬಗೆ ಕುತೂಹಲದ ಸಂಗತಿ.

ಸಿಂಹ ಪಾತ್ರ ಕಾಣಿಸಿಕೊಳ್ಳುವ ಅತ್ಯಂತ ಜನಪ್ರಿಯ ಪ್ರಸಂಗ 'ಸ್ಯಮಂತಕೋಪಾಖ್ಯಾನ' ಅಂದರೆ, ಜಾಂಬವತಿ ಕಲ್ಯಾಣ. ಸ್ಯಮಂತಕವೆಂಬ ರತ್ನವನ್ನು ಸೂರ್ಯನು, ಸತ್ರಾಜಿತ ರಾಜನಿಗೆ ಅನುಗ್ರಹಿಸಿದ್ದ. ಶ್ರೀಕೃಷ್ಣ ಅದನ್ನು ಬಯಸಿ ಪಡೆಯಲು ಪ್ರಯತ್ನಿಸಿ ವಿಫಲನಾಗಿದ್ದ. ಸತ್ರಾಜಿತನ ಸಹೋದರ ಪ್ರಸೇನ, ಸ್ಯಮಂತಕ ರತ್ನವನ್ನು ಧರಿಸಿ ಕಾಡಿಗೆ ಬೇಟೆಗೆ ಹೋದ. ಸಿಂಹವೊಂದು ಪ್ರಸೇನನನ್ನು ಕೊಂದು ಸ್ಯಮಂತಕವನ್ನು ಒಯ್ದುಬಿಟ್ಟಿತು. ಭಲ್ಲೂಕ ರಾಜ ಜಾಂಬವಂತ ಸಿಂಹವನ್ನು ಸಾಯಿಸಿ ಸ್ಯಮಂತಕವನ್ನು ಪಡೆದ. ಆದರೆ ಪ್ರಸೇನನನ್ನು ಕೊಂದು ರತ್ನವನ್ನು ಅಪಹರಿಸಿದ ಅಪವಾದ ಕೃಷ್ಣನ ಮೇಲೆ ಬಂತು. ಆರೋಪಮುಕ್ತನಾಗಲು ಕೃಷ್ಣ ಜಾಂಬವನನ್ನು ಸೋಲಿಸಿ ಸ್ಯಮಂತಕ ರತ್ನವನ್ನೂ, ಅವನ ಮಗಳಾದ ಜಾಂಬವತಿಯೆಂಬ ಕನ್ಯಾರತ್ನವನ್ನೂ ಪಡೆದ.

ಯಕ್ಷಗಾನದ ಸಿಂಹ ವೇಷವನ್ನು ವಾಸ್ತವದ ಅನುಕರಣೆಯಿಂದ ಮಾಡುವ ಪದ್ಧತಿ ಒಂದು ಕಾಲಘಟ್ಟದಲ್ಲಿ ಪ್ರಾರಂಭವಾಗಿ ಪ್ರಸಿದ್ಧವೂ ಆಗಿಬಿಟ್ಟಿತು.

(42ನೇ ಪುಟ ನೋಡಿ)